

# ಮೇಕಪ್

## ಭಯ ಬೇಡ

## ತಿಳಿವಳಿಕೆ ಇರಲಿ



ಉಮಾ ಜಯಕುಮಾರ್
ಬ್ಯೂಟಿಶಿಯನ್

ಮೇಕಪ್ ಎಂದೊಡನೆ ಜನರಲ್ಲಿ ಒಂದು ರೀತಿ ಭಯವಿದೆ. ಇದರಿಂದ ಚರ್ಮಕ್ಕೆ ಹಾನಿಯಾದರೆ ಹೇಗೆ ಎಂದು. ಆದರೆ ಮೇಕಪ್ ಸಾಮಗ್ರಿಗಳನ್ನು ಬಳಸುವ ಕಂಪೆನಿ, ಅದನ್ನು ಉಪಯೋಗಿಸುವ ರೀತಿ ಇವೆಲ್ಲವನ್ನೂ ತಿಳಿದುಕೊಂಡು ಮೇಕಪ್ ಮಾಡಿಕೊಂಡರೆ ಚರ್ಮಕ್ಕೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ಯಾವಾಗಲೂ ಮೇಕಪ್ ನಮಗೂ ಮತ್ತು ನಮ್ಮನ್ನು ನೋಡುವವರಿಗೂ ಮುಜುಗರ ಉಂಟು ಮಾಡದಂತಿರಬೇಕು. ಬಳಸುವ ಪ್ರಸಾಧನ ಸಾಮಗ್ರಿಗಳು ತ್ವಚೆಗೆ ಹೊಂದುವಂತಿರಬೇಕು. ಇದರೊಂದಿಗೆ ಸಮಯ ಪ್ರಜ್ಞೆಯೂ ತುಂಬಾ ಮುಖ್ಯ. ಹಾಗೆಯೇ ಮೇಕಪ್ ನಾವು ಹೊರಡುವ ಸಮಾರಂಭ ಹಾಗೂ ವಾತಾವರಣಕ್ಕೆ ತಕ್ಕಂತೆ ಇರಬೇಕು. ಈ ಎಲ್ಲದಕ್ಕೆ ಸಂಬಂಧಿಸಿದಂತೆ ಕೆಲ ನಿಯಮ ಪಾಲಿಸಬೇಕಾಗುತ್ತದೆ.

* ಮೇಕಪ್ ಮಾಡಿಕೊಳ್ಳುವ 10 ರಿಂದ 15 ನಿಮಿಷಗಳ ಮೊದಲು ಮುಖ ತೊಳೆದುಕೊಂಡಿರಬೇಕು. ಯಾವುದೇ ತೇವಾಂಶ ಅಥವಾ ಎಣ್ಣೆ ಅಂಶ ಇರಬಾರದು.
* ಹೊರಗಡೆ ಹೋಗುವ ಅರ್ಧ ಗಂಟೆ ಮುಂಚಿತವಾಗಿ ಮೇಕಪ್ ಮಾಡಿಕೊಂಡಿರಬೇಕು. ನೆನಪಿನಲ್ಲಿಡಬೇಕಾದದ್ದು ಎಂದರೆ; ಒಳ್ಳೆ ಕಂಪನಿಯ ಮೇಕಪ್ ಕ್ರೀಮ್, ಬಳಸುವ ಬ್ರಶ್ ಕಾಂಪಾಕ್ಟ್ ಬಳಸುವುದು ಉತ್ತಮ. ಈ ರೀತಿ ಬಳಸಿದಲ್ಲಿ ನಮ್ಮ ಚರ್ಮಕ್ಕೆ ಯಾವುದೇ ಹಾನಿಯಾಗುವುದಿಲ್ಲ.
* ಮೇಕಪ್ ಮಾಡುವಾಗ ಎಷ್ಟು ಖುಷಿ ಹಾಗೂ ಆಸಕ್ತಿ ಇರುತ್ತದೆಯೋ ಅಷ್ಟೇ ಆಸಕ್ತಿಯೂ ಮೇಕಪ್ ತೆಗೆಯುವಾಗಲೂ ಇರಬೇಕು. ಈ ಆಸಕ್ತಿ ಇದ್ದಲ್ಲಿ ಚರ್ಮಕ್ಕೆ ಆಗುವ ಅಪಾಯವನ್ನು ತಪ್ಪಿಸಬಹುದು.
* ಮೊದಲು ಬಟ್ಟೆ ಧರಿಸಿ, ಅದರ ಬಣ್ಣವನ್ನು ಗಮನದಲ್ಲಿಟ್ಟುಕೊಂಡು ಮೇಕಪ್ ಮಾಡಿಕೊಂಡಲ್ಲಿ ಒಟ್ಟಾರೆ ಸೌಂದರ್ಯ ಇಮ್ಮಡಿಗೊಳ್ಳುವುದು.
* ಒಂದೇ ಸಲಕ್ಕೇ ಮೇಕಪ್ ಮಾಡಿಕೊಳ್ಳಬೇಕು. ಪದೇ ಪದೇ ಒರೆಸಿ ಮಾಡುವ ಮೇಕಪ್‌ನಲ್ಲಿ ಪ್ಯಾಚ್ ಬೀಳುತ್ತದೆ. ಒಟ್ಟಾರೆ ಮೇಕಪ್ ಚೆನ್ನಾಗಿರುವುದಿಲ್ಲ.

### ಫೌಂಡೇಶನ್ ಮೇಕಪ್

ಮೇಕಪ್‌ನಲ್ಲಿ ಹಲವಾರು ಬಗೆಗಳಿವೆ. ಅವುಗಳಲ್ಲಿ ಫೌಂಡೇಶನ್ ಮೇಕಪ್ ಕೂಡ ಒಂದು. ಈ ಫೌಂಡೇಶನ್ ಬಳಸುವ ಬಗ್ಗೆ ಮಾಹಿತಿ ಅವಶ್ಯ. ಮದುವಣಗಿತ್ತಿಯರಿಗೆ ಈ ಮೇಕಪ್ ಮಾಡುವಾಗ ಎಚ್ಚರ ವಹಿಸಬೇಕು, ಇಲ್ಲವಾದಲ್ಲಿ ಈ ಮೇಕಪ್ ಎದ್ದು ಕಾಣುವಂತೆಯೂ, ಪ್ಯಾಚ್ ಬೀಳುವ ಸಾಧ್ಯತೆಯೂ ಉಂಟು. ಫೌಂಡೇಶನ್ ಅನ್ನು ಅವರ ಚರ್ಮದ ಬಣ್ಣಕ್ಕೆ ಹೊಂದುವಂತೆ. ಹಚ್ಚಬೇಕು. ಇದನ್ನು ನೇರವಾಗಿ ಬಳಸದೆ ಅದಕ್ಕೆ ಮಾಯಿಶ್ಚರೈಸರ್ ಮಿಶ್ರಮಾಡಿ ಬಳಸುವುದು ಉತ್ತಮ.

| | ಫೌಂಡೇಶನ್ | ಕ್ರೀಮ್ |
|---|---|---|
| * ಮೀಡಿಯಂ ವರ್ಣ | 50% | 50% |
| * ಫೇರ್ ವರ್ಣ | 25% | 50% |
| * ಡಾರ್ಕ್ ವರ್ಣ | 75% | 25% |

ಮುಖದ ವರ್ಣಕ್ಕೆ ತಕ್ಕಂತೆ ಪೌಂಡೇಶನ್+ಕ್ರೀಮ್ ಎರಡು ಮಿಶ್ರ ಮಾಡಿ ಮುಖದ ಮೇಲೆ ಅಲ್ಲಲ್ಲಿ ಬೆರಳಿನಿಂದ ಹಚ್ಚಿ ನಂತರ ಸ್ಪಾಂಜ್‌ನಿಂದ ನಿಧಾನ ಮುಖದ ಭಾಗಕ್ಕೆ ಸವರಬೇಕು. ನಂತರ ಕಾಂಪಾಕ್ಟ್ ಹಾಕಬೇಕು. ಯಾವುದೇ ಕಾರಣಕ್ಕೂ ಡಸ್ಟ್ ಪೌಡರ್ ಬಳಸಬಾರದು. ಬ್ಲಶ್ ಆನ್ ಬ್ರಶ್ ಸಹಾಯದಿಂದ ನ್ಯಾಚುರಲ್ ಬಣ್ಣ ಹಚ್ಚಿಕೊಳ್ಳಬೇಕು. ಐ ಶ್ಯಾಡೋ ಗೋಲ್ಡ್, ಸಿಲ್ವರ್ ಹಾಗೂ ನ್ಯಾಚುರಲ್ ಕಲರ್ ಇದ್ದು ಅದನ್ನು ಬ್ರಶ್ ಸಹಾಯದಿಂದ ಬಳಸುವುದು ಉತ್ತಮ. ನಂತರ ಐ ಪೆನ್ಸಿಲ್ ಹಚ್ಚಿ, ರೆಪ್ಪೆ ಕೂದಲಿಗೆ ಮಸ್ಕರಾ ಹಚ್ಚಬೇಕು. ಹಾಗೆಯೇ ಐ ಲೈನರ್ ಕೂಡ ಹಚ್ಚಬೇಕು. ಲಿಪ್‌ಸ್ಟಿಕ್ ಹಚ್ಚಿಕೊಳ್ಳುವಾಗ ತುಟಿಗಳ ವರ್ಣಕ್ಕೆ ಹೊಂದಿರಲಿ. ನಂತರ ಹಣೆಗೆ ತಿಲಕವಿಟ್ಟು ಅದನ್ನು ಕಪ್ಪು ಬಿಳಿಪು ಬಣ್ಣದಿಂದ ಶೃಂಗರಿಸಿದರೆ ಅಂದ ಹೆಚ್ಚುತ್ತದೆ.





ಚಿತ್ರ : ದಿಲೀಪ್ ಬ್ಯಾನರ್ಜಿ